**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಮುಖ್ಯ ಅಭಿಯಂತರರು(ಓ.ಎಫ್.ಸಿ)ರವರ ಕಛೇರಿ, 3ನೇ ಮಹಡಿ, ಅನೆಕ್ಸ್ ಕಟ್ಟಡ,
ಎನ್.ಆರ್.ವೃತ್ತ, ಬೆಂಗಳೂರು-2.

---

ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/410/2015-16 ದಿನಾಂಕ: 14-12-2015

ರವರಿಗೆ,

ಎಲ್ಲಾ ಕಾರ್ಯಪಾಲಕ ಅಭಿಯಂತರರು
(ಪೂರ್ವ) ವಲಯ

ಮಾನ್ಯರೆ,

**ವಿಷಯ:-** ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಿರುವ ಓ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸುವ ಬಗ್ಗೆ.

**ಉಲ್ಲೇಖ:-**
1) ಪೂಜ್ಯ ಮಹಪೌರರ ಟಿಪ್ಪಣಿ ಸಂಖ್ಯೆ: 172/15-16, ದಿನಾಂಕ:31-10-2015.
2) ಮುಖ್ಯ ಅಭಿಯಂತರರು (ಓ.ಎಫ್.ಸಿ)ರವರ ಪತ್ರ ಸಂಖ್ಯೆ: 389/15-16, ದಿನಾಂಕ:03-11-2015.
3) ಮಾನ್ಯ ಆಯುಕ್ತರವರ ಪತ್ರ ಸಂಖ್ಯೆ: ಅ/ಪಿರ್/8234/15-16, ದಿನಾಂಕ:11-11-2015.
4) ಈ ಕಛೇರಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/410/2015-16, ದಿನಾಂಕ: 14-11-2015.
5) ಪೂಜ್ಯ ಮಹಾಪೌರರ ಟಿಪ್ಪಣಿ ಸಂಖ್ಯೆ: ಎಂಪಿಎಸ್/ಪಿಆರ್/350/2015-16, ದಿನಾಂಕ: 07-12-2015.

*******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಲಾಗುತ್ತಿರುವ ಓ.ಎಫ್.ಸಿ ಕೇಬಲ್‌ಗಳ ಬಗ್ಗೆ ಪೂಜ್ಯ ಮಹಾಪೌರರ ದಿನಾಂಕ:02-12-2015 ರಂದು ಸಭೆ ನಡೆಸಿರುತ್ತಾರೆ. ಸಭೆಯಲ್ಲಿ ಎಲ್ಲಾ 198 ವಾರ್ಡ್‌ಗಳಲ್ಲಿ ಓ.ಎಫ್.ಸಿ ಅಳವಡಿಸಲು ಕೇಂದ್ರ ಕಛೇರಿಯ ಓ.ಎಫ್.ಸಿ ಶಾಖೆಯಿಂದ ವಿವಿಧ ಓ.ಎಫ್.ಸಿ ಸಂಸ್ಥೆಗಳಿಗೆ ಅನುಮತಿ ನೀಡಲಾಗುತ್ತಿದ್ದು, ಕೆಲವು ಓ.ಎಫ್.ಸಿ ಸಂಸ್ಥೆಗಳು ಅನಧಿಕೃತವಾಗಿ ಓ.ಎಫ್.ಸಿಗಳನ್ನು ಅಳವಡಿಸಿರುವುದನ್ನು ಪತ್ತೆ ಹಚ್ಚಿ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ ಹಾಗೂ ಅನೇಕ ರಸ್ತೆಯಲ್ಲಿ ವಿದ್ಯುತ್ ಕಂಬಗಳು, ರಸ್ತೆ ಬದಿ ಮರಗಳ ಮುಖಾಂತರ ಕೇಬಲ್‌ಗಳನ್ನು (Overhead/ Overhanging cable) ಅಳವಡಿಸಿರುವುದನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ ನಿರ್ದೇಶನ ನೀಡಿರುತ್ತಾರೆ ಮತ್ತು ತೆರವುಗೊಳಿಸುವ ಕಾರ್ಯಕ್ರಮವನ್ನು ದಿನಾಂಕ: 16-12-2015 ರಂದು ಪ್ರಾರಂಭಿಸಲು ಸಹ ಸೂಚಿಸಿರುತ್ತಾರೆ.

Office of the I-T Advisor
Bangalore Mahanagara Palike
No. 2256
Date. 15/12

ಈ ಮೇರೆಗೆ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರು ಪ್ರಮುಖ ರಸ್ತೆಗಳನ್ನು ಗುರುತಿಸಿ ರಸ್ತೆಗಳಲ್ಲಿ ಪ್ರಥಮವಾಗಿ Overhead/ Overhanging cable ಗಳನ್ನು ತೆರವುಗೊಳಿಸಲು ದಿನಾಂಕ: 16-12-2015 ರಿಂದ ಕಾರ್ಯಕ್ರಮವನ್ನು ಹಮ್ಮಿಗೊಂಡು ಎಲ್ಲಾ ಅನಧಿಕೃತ Overhead/Overhanging cable ಗಳನ್ನು ತೆರವುಗೊಳಿಸಲು ಕೋರಿದೆ.

ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಗುರುತಿಸಿರುವ ರಸ್ತೆಗಳ ಪಟ್ಟಿಯನ್ನು ಈ ಕಛೇರಿಗೆ ನೀಡಿ ರಸ್ತೆಯಲ್ಲಿ ಅಧಿಕೃತವಾಗಿ ನೀಡಿರುವ ಓ.ಎಫ್.ಸಿ ಪರವಾನಗಿಯನ್ನು ಪಡೆಯಬಹುದಾಗಿದೆ. ಮಾನ್ಯ ಆಯುಕ್ತರು ನೀಡಿರುವ ದಿನಾಂಕ:11-11-2015ರ ಆಂತರಿಕ ಕಛೇರಿ ಟಿಪ್ಪಣಿ ಪ್ರಕಾರ ಸಹ ಕಾರ್ಯಕ್ರಮವನ್ನು ಹಮ್ಮಿಕೊಂಡು ತೆಗೆದುಕೊಂಡ ಕ್ರಮದ ಬಗ್ಗೆ ವಾರ್ಡ್‌ವಾರು ವಿವರವನ್ನು ಈ ಕಛೇರಿಗೆ ತಿಳಿಸಲು ಸೂಚಿಸಿದೆ.

ಸಹಿ/-

ಮುಖ್ಯ ಅಭಿಯಂತರರು (ಓ.ಎಫ್.ಸಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:-</u>

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು(ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
5. ಪ್ರಧಾನ ಅಭಿಯಂತರರ ಅವಗಾಹನೆಗೆ ಸಲ್ಲಿಸಿದೆ.
6. ಜಂಟಿ/ಅಪರ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ಯಲಹಂಕ, ಆರ್.ಆರ್.ನಗರ) ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ಯಲಹಂಕ, ಆರ್.ಆರ್.ನಗರ) ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಸಲ್ಲಿಸುತ್ತಾ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ ಪ್ರತಿಯನ್ನು ಕಳುಹಿಸಿದೆ.
10. ಕಾರ್ಯಪಾಲಕ ಅಭಿಯಂತರರು (ಓ.ಎಫ್.ಸಿ- ಕೋಶ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ಪೂರ್ವ ವಲಯ ರವರಿಗೆ ಸಿಬ್ಬಂದಿಯೊಂದಿಗೆ ಲಾಡರ್ ವಾಹನಗಳನ್ನು ಮೇಲ್ಕಂಡ ಕಾರ್ಯಕ್ಕೆ ನೀಡಿ ಸಹಕರಿಸುವಂತೆ ಸೂಚಿಸಿದೆ.
12. ಕಛೇರಿ ಪ್ರತಿ.

ಮುಖ್ಯ ಅಭಿಯಂತರರು (ಓ.ಎಫ್.ಸಿ) 14/12
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

14/12